ಶ್ರೀ ಎಚ್. ಡಿ. ದೇವೇಗೌಡ—ಅವರ ಬಲೆಗೆ ನಾನು ಬೀಳುವುದಕ್ಕೆ ತಯಾರಾಗಿಲ್ಲ. ಅವರು ಕೌರವನ ಪಾತ್ರವನ್ನು ಚೆನ್ನಾಗಿ ಮಾಡುತ್ತಿದ್ದಾರೆ. ನಾನು ಭೀಮನ ಪಾತ್ರ ಮಾಡಬೇಕೆಂದು ಈ ಜಾಗದಲ್ಲಿ ಕುಳಿತಿದ್ದೇನೆ, ಅವರ ಮೇಲೆ ಗದಾ ಪ್ರಹಾರ ಮಾಡುವುದಕ್ಕೆ ಇಲ್ಲಿ ಕುಳಿತಿದ್ದೇನೆ.

Policy of the Minister for Municipal Administration

SRI B. B. SAYANAK (Belgaum).—Madam Speaker, yesterday I have given a Call Attention Notice and you are aware of it. The notice is about the policy of the Municipal Administration Minister. Let me know whether it is admitted.

MADAM SPEAKER.—On Monday we will take it up.

Remarks of Sri H. D. Deve Gowda about contract carriage and a lorry owner

SRI AZEEZ SAIT.—When I was absent on the other day Hon. Member Sri Deve Gowda raised two questions one relating to a contract carriage caught by the Police and the owner of the carriage paid Rs. 10,000 and escaped from the clutches of the law. It seems he got this information from the Police Sub-inspector. I had written a letter to him requesting him to let me know the number of the contract carriage and the name of the Sub-inspector who told him.

The second allegation is about a person by name Sri Muniswamiah a contractor owning a lorry, who was due to Government Rs. 36,000 as tax, has escaped from a prosecution case filed against him by the intervention of Government. I would like to inform the Hon. House that the matter has been referred to the Law Department and it is still under examination of that Department. Sri Deve Gowda is having an apprehension depending upon the rumours that the Government is not doing its duty properly.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಒಳ್ಳೆಯ ಕೆಲಸ ಮಾಡಿದರು. ವಿರೋಧ ಪಕ್ಷದ ನಾಯಕನಾಗಿ ಬೇಜವಾಬ್ದಾರಿ ಮಾತನ್ನು ಆಡಬಾರದು, ಸತ್ಸಂಪ್ರದಾಯವನ್ನು ಹಾಕಿಕೊಂಡು ನಡೆಯಬೇಕೆಂದು ಹೇಳಿದ್ದಾರೆ. ಅವರು ನನಗೆ ಒಂದು ಪತ್ರ ಬರೆದು ಹತ್ತು ಸಾವಿರ ರೂಪಾಯಿ ಕೊಟ್ಟಿರುವುದಾಗಿ ಯಾರು ಹೇಳಿದರು ಎಂದು ಕೇಳಿದ್ದಾರೆ. ನಾನು ಸಂಬಂಧಪಟ್ಟವರಿಗೆ ಒಂದು ಪತ್ರ ಬರೆದಿದ್ದೆ. ಅವರು, ನಾನು ಕೊಟ್ಟಿರುವ ೧೦ ಸಾವಿರ ರೂಪಾಯಿ ವಸೂಲು ಮಾಡುವುದಕ್ಕೇ ಆಗಿಲ್ಲ, ೧೦ ಸಾವಿರ ರೂಪಾಯಿ ಕಳೆದುಕೊಂಡು ಪರ್ಮಿಟ್ ತೆಗೆದುಕೊಂಡಿದ್ದೇನೆ, ಆ ಹಣ ಇನ್ನೂ ಸಂಪಾದನೆ ಯಾಗಿಲ್ಲ, ನೀವು ನನ್ನ ಹೆಸರನ್ನು ಕೊಟ್ಟರೆ ನನಗೆ ಹೆರಾಸ್‌ಮೆಂಟ್ ಆಗಿ ಮತ್ತೆ ೧೦ ಸಾವಿರ ರೂಪಾಯಿ ಖರ್ಚಾಗುತ್ತದೆ. ಆದ್ದರಿಂದ ನನ್ನ ಹೆಸರನ್ನು ಹೇಳದೆ ದಯವಿಟ್ಟು ಉಪಕಾರ ಮಾಡಿ ಎಂದು ಬರೆದಿದ್ದಾರೆ.

SRI AZEEZ SAIT.—Let the Hon. Leader of the Opposition give a correct information otherwise it becomes a breach of privilege.

SRI C. M. ARUMUGHAM.—All of a sudden the Minister raised it to-day. He must have brought it to the notice of the Leader of the Opposition that he would raise that point. It can be taken up on Monday so that the Leader of the Opposition may be in a position to answer.

SRI AZEEZ SAIT. —It may be taken up at any time they want.

MADAM SPEAKER.—Let it be taken up on Monday.

ಶ್ರೀ ಹೆಚ್. ಡಿ. ದೇವೇಗೌಡ.—ಅವರಿಗೂ ನಾನು ಕಾಗದ ಬರೆದಿದ್ದೇನೆ. ಗವರ್ನರ್ ಭಾಷಣದಲ್ಲಿ ಭಾಷಣ ಮಾಡುವಾಗ ೧೦ ಸಾವಿರ ರೂಪಾಯಿ ಕೊಟ್ಟು ಕಂಟ್ರಾಕ್ಟ್ ಕಾರೇಜ್ ಪರ್ಮಿಷನ್ ಪಡೆದಿದ್ದೀವೆ ಎಂದು ಬಸ್ಸು ಕಂಡಕ್ಟರು ಜನತೆ ಮುಂದೆ ಹೇಳಿದ ಮಾತು. ಯಾರು ಹೇಳಿದರು ಎಂದು ತಿಳಿಸಬೇಕು ಎಂದು ಹೇಳಿ ಪತ್ರ ಬರೆದಿದ್ದೇನೆ. ನೀವು ರಕ್ಷಣೆ ಕೊಡಬೇಕು.

ಅಧ್ಯಕ್ಷರು.—ತಾವು ಹೇಳುತ್ತಾ ಇರುವುದು ಯಾರೋ ಒಬ್ಬರು ಕಾಗದ ಬರಿದಿದ್ದಾರೆ. ಆ ಹೆಸರು ಹೇಳುವುದಿಲ್ಲ, ಕಾಗದವನ್ನು ಕೊಡುವುದಿಲ್ಲ ಎಂದು.

SRI C. M ARUMUGHAM.—Let there be some enquiry. Let us see.

ಶ್ರೀ ಹೆಚ್. ಡಿ. ದೇವೇಗೌಡ.—೧೦ ಸಾವಿರ ರೂಪಾಯಿಗಳನ್ನು ಶ್ರೀ ಅಜೀಜ್ ಸೇಟರಿಗೆ ಕೊಟ್ಟು ಅವರಿಂದ ಪರ್ಮಿಟ್ ತೆಗೆದುಕೊಂಡರೆ ನಾನು ಅವರನ್ನು ಎನ್‌ಕ್ವೈರಿ ಮಾಡಿ ಎಂದು ಹೇಳುವುದಕ್ಕಾಗುತ್ತದೆಯೇ ?

SRI AZEEZ SAIT —They are going far beyond their scope. They must substantiate what they say. Every one has got self-respect and honour.

ಶ್ರೀ ಹೆಚ್. ಡಿ. ದೇವೇಗೌಡ.—ಅಜೀಜ್ ಸೇಟ್ ಸಾಹೇಬರು ಮಂತ್ರಿಗಳಾದ ಮೇಲೆ ರಾಜ್ಯದಲ್ಲಿ ಎಷ್ಟು ಕಾಂಟ್ರಾಕ್ಟ್ ಬಸ್ಸುಗಳು ಓಡಾಡುತ್ತಿವೆ ? ಮಾನ್ಯ ಮಂತ್ರಿಗಳು ಮಾತನಾಡುವ ಕಾಲದಲ್ಲಿ ಕಾನೂನು ತಿದ್ದುಪಡಿ ಆಗಬೇಕು ಎಂದು ಹೇಳಿದರು. ಅವರ ಸಂಕಷ್ಟವನ್ನು ತೋಡಿಕೊಂಡರು. ನೀವು ಅಧಿಕಾರಕ್ಕೆ ಬಂದ ಮೇಲೆ ಎಷ್ಟು ಸ್ಟೇಟ್ ಟ್ರಾನ್ಸ್‌ಪೋರ್ಟ್ ಅಥಾರಿಟೀಸ್‌ಗೆ ಪರ್ಮಿಟ್ ಕೊಟ್ಟಿದೀರಿ ಎಂದು ತಿಳಿಸಬೇಕು.

* * * *

SRI S. M. KRISHNA.—Madam Speaker, There are certain well established procedures and conventions; when charges of a very grave nature on the personal integrity of a Minister are being made, certainly the House has got to take very serious note of it So, Madam Speaker, we are governed by certain procedures and certain conventions. Now, there is indication in the Rules of Procedure that a personal allegation against a Member or a Minister if it has to be made, then due notice in writing will have to be given to the Speaker.

SRI C. M. ARUMUGHAM.—What Rules of Procedure is he speaking of ?

SRI K. H. PATIL.—I cannot understand why Mr. Arumugham is standing up every now and then.

****** Mater expunged as ordered by the chair.**

SRI C. M. ARUMUGHAM.—Two Ministers are standing.

MADAM SPEAKER.—If they are making a mistake why do you want to do the same mistake ?

ಶ್ರೀ ಎಚ್. ಸಿದ್ಧವೀರಪ್ಪ —ನಾವು ಸಿಟ್ಟು ಮಾಡಿಕೊಂಡು ಮಾತನಾಡುವುದರಿಂದ ಯಾವ ಕಾರ್ಯವನ್ನೂ ಸಾಧನೆ ಮಾಡುವುದಕ್ಕಾಗುವುದಿಲ್ಲ.

SRI C. M. ARUMUGHAM.—All the Ministers are functioning in that fashion now.

SRI K H. PATIL.—Is it not objectionable. Madam Speaker ? He can name a person. Instead of that, he said that all the Ministers are doing like that.

MADAM SPEAKER.—Hon. Members should not talk like that about all the Ministers. Why do as the member make a general statement ?

SRI C. M ARUMUGHAM —When they do it, we will have to repeat it.

ಶ್ರೀ ವಾಟಾಳ್ ನಾಗರಾಜ್.— ಮಂತ್ರಿಗಳೇ ಗುದ್ದಾಟಕ್ಕೆ ಬರುವುದಾದರೆ ಈ ರಾಜ್ಯಕ್ಕೆ ರಕ್ಷಣೆ ಬೇಕು. ಅವರ ಕೈಯಲ್ಲಿ ನಾವು ರಾಜ್ಯವನ್ನು ಕೊಟ್ಟಿದ್ದೇವೆ.

ಶ್ರೀ ಬಿ. ಪುಟ್ಟಸ್ವಾಮಿ —ಜುಬ್ಬ ಎಳೆದುಕೊಂಡು ಎದ್ದಮೇಲೆ ಕೋಪದಲ್ಲಿ ನಾವು ಏನಾದರೂ ಕೇಳಬಾರದೇ ?

ಶ್ರೀ ಎಚ್. ಸಿದ್ಧವೀರಪ್ಪ.—ಮಾನ್ಯ ಸದಸ್ಯರಿಗೆ ಭಗವಂತನು ದೊಡ್ಡ ಗಂಟಲು ಕೊಟ್ಟಂತೆ ನಮಗೂ ಕೊಟ್ಟಿದ್ದಾನೆ.

ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚು ಮಾತನಾಡತಕ್ಕ ಸ್ವಭಾವ ಇಟ್ಟುಕೊಂಡಿಲ್ಲ. ಇಲ್ಲಿ ನಾವುಗಳು ಒಬ್ಬರೇ ಕುಳಿತು ಕೆಲಸ ಮಾಡುತ್ತಿಲ್ಲ. ಇಲ್ಲಿ ಏನೇನು ಕಾರ್ಯಕಲಾಪಗಳನ್ನು ಮಾಡುತ್ತಿದ್ದೇವೆ. ನಾವು ಯಾವ ರೀತಿ ಜನರಿಗೆ ಅನುಕೂಲವಾಗುವ ಕೆಲಸಗಳನ್ನು ಮಾಡುತ್ತಿದ್ದೇವೆ ಎನ್ನುವುದನ್ನೆಲ್ಲಾ ಜನ ನೋಡುತ್ತಿರುತ್ತಾರೆ. ಇದನ್ನು ನಮ್ಮ ಎಲ್ಲ ಸದಸ್ಯರೂ ದಯಮಾಡಿ ತಿಳಿದುಕೊಳ್ಳಲಿ ಎಂದು ಮನವಿ ಮಾಡುತ್ತಿದ್ದೇನೆ. ನೀವು ಈ ಕಡೆ ಇದ್ದಾಗ ನಾವು ಅಲ್ಲಿ ಏನೇನು ಹೇಳಿದ್ದೇವೆ ಎನ್ನುವುದನ್ನೂ ನೋಡಿದ್ದೇವೆ. ಇಂದು ನೀವು ಆ ಕಡೆ ಇರುವಾಗ ನಾವೇನು ಮಾಡುತ್ತಿದ್ದೇವೆ ಎನ್ನುವುದನ್ನೂ ನೋಡುತ್ತಿದ್ದೀರಿ. ಆದರೆ ನೀವು ಹಿಂದೆ ಇಲ್ಲಿದ್ದಾಗ ಶಹಬಾಸಗಿರಿಯನ್ನು ಜನರಿಂದ ಪಡೆಯಲಿಲ್ಲ. ಇಂದು ನಾವು ಏನು ಮಾಡುತ್ತಿದ್ದೇವೆ ಅದನ್ನು ನೋಡಿ ಶಹಬಾಸ್‌ಗಿರಿ ಕೊಡುತ್ತಿದ್ದಾರೆ. ನಾನು ಹೇಳುವುದು ಇಷ್ಟೇ. ಉದಾಹರಣೆಯಾಗಿ ಹೇಳಬೇಕಾದರೆ ನಿನ್ನೆ ದಿವಸ ನಾನು ಇಲ್ಲಿರಲಿಲ್ಲ. ಇಲ್ಲಿ ಏನೇನಾದವು ಎನ್ನುವುದು ಪತ್ರಿಕೆಗಳಲ್ಲಿ ಬಂದಿದೆ. ಆದರಂತೆ ನೋಡುವಾಗ ೧೯೭೭ರಿಂದ ವಿಚಾರಣೆಯಾಗಬೇಕು ಎಂದು ಮಾನ್ಯ ಸದಸ್ಯರು ಹೇಳುವುದನ್ನು ನೋಡಿದರೆ ಪ್ರಪಂಚದಲ್ಲಿ ಇರತಕ್ಕ ಯಾವ ರಾಜ್ಯದಲ್ಲಿ ಕೂಡ ಕಳೆದ ಐವತ್ತು ವರ್ಷದ ಅಥವಾ ೨೫ ವರ್ಷಗಳ ಹಿಂದೆ ನಡೆದಿರುವುದನ್ನು ಇಂದು ವಿಚಾರಣೆ ಮಾಡಬೇಕು ಎನ್ನುವುದು ಆಗಿಲ್ಲ. ನಾವು ತಿಳಿದುಕೊಂಡಿರುವ ಮಟ್ಟಿಗೆ ವಿಚಾರಣೆಯಾಗಬೇಕಾದರೆ ಸ್ಪೆಸಿಫಿಕ್ ಇಷ್ಯೂ ಮೇಲೆ ಚಾರ್ಜುಗಳನ್ನು ತಾವುಗಳು ಫ್ರೇಂ ಮಾಡಬೇಕು. ೨೫ ವರ್ಷಗಳ ಹಿಂದೆ ನಡೆದಿರುವುದರ ಮೇಲೆ ಚಾರ್ಜುಗಳನ್ನು ಮಾಡುವುದಾದರೂ ಹೇಗೆ ? ಇದರಿಂದೇನೂ ಸಾಧನೆ ಮಾಡಿದಂತಾಗುವುದಿಲ್ಲ. ನಾವು ಹಿಂದೆ ಆ ಕಡೆ ಇದ್ದಾಗ ಬರೆದು ಕೊಟ್ಟು ವಿಚಾರಣೆ ಮಾಡಬೇಕೆಂದು ಶ್ರೀ ಶಿವಪ್ಪನವರ ಕಾಲದಲ್ಲಿ ಮಾಡಲಾಗಿತ್ತು. ಹಿಂದೆ ಇದ್ದ ಸರಕಾರ ಕೂಡ ಇದರ ಬಗ್ಗೆ ಏನೂ ಮಾಡಲಿಲ್ಲ. ನಾವು ಇದರ ಬಗ್ಗೆ ಆಗ ನಿರ್ಣಯ ಕೂಡ ತಂದಿದ್ದೆವು. ಶ್ರೀ ನಿಜಲಿಂಗಪ್ಪನವರೆ ಆಗ ಇದ್ದವರು ಇದನ್ನು ನೀವು ಇರುವಾಗಲೇ ಮಾಡಿ. ನೀವು ಹೊರಟು ಹೋದ ಮೇಲೆ ಮಾಡಿದರೆ ಸರಿಯಾಗುವುದಿಲ್ಲ ಎಂದು ಹೇಳಿದಾಗ ಅವರು ಸರಕಾರ ಇದ್ದೇ ಇರುತ್ತದೆ. Government is a continuing body. ಬರುವ ಸರಕಾರ ತಕ್ಕ ಕ್ರಮ ಕೈಗೊಳ್ಳುತ್ತದೆ, ಹಿಂದೆ ಇದ್ದ ಸರಕಾರದವರು ನಮಗೆಲ್ಲಾ ನೋಟೀಸು ಕೊಟ್ಟು ನಮ್ಮಲ್ಲಿರುವ ಆಸ್ತಿಪಾಸ್ತಿಗಳನ್ನು ವಿವರ ಕೊಡಬೇಕೆಂದು ಹೇಳಿದ ಕೂಡಲೇ ನಾವೆಲ್ಲ ಅದನ್ನು ಒದಗಿಸಿಕೊಟ್ಟಿದ್ದೆವು. ಆದರೆ ಶ್ರೀ ವೀರೇಂದ್ರ ಪಾಟೀಲರ ಸರಕಾರ ಬಂದ ಕೂಡಲೇ ಇದನ್ನು ಕೈಬಿಟ್ಟಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ —ಮಾನ್ಯ ಸಿದ್ದವೀರಪ್ಪನವರು ಎಲ್ಲೆಲ್ಲಿಯೋ ಹೋಗಿ ಇಲ್ಲಿ ವಾದ ಮಾಡುತ್ತಿದ್ದಾರೆ. ಇವೆಲ್ಲ ಬೇರೆ ವಿಚಾರಗಳು, ಇಲ್ಲಿ ಎತ್ತಬಾರದು. ಇಲ್ಲಿನ ಸಂದರ್ಭವೇ ಬೇರೆ.

ಅಧ್ಯಕ್ಷರು —ತಾವು ಇಮೋಷನಲ್ ಆಗಬೇಡಿ.

SRI H. D. DEVA GOWDA.—I am sorry, you have allowed the Minister to go on a wrong path. He is replying to what was said yesterday. Today's issue is quite different.

ಶ್ರೀ ಎಂ. ಎಸ್. ಕೃಷ್ಣನ್.—ನನ್ನದೊಂದು ಕ್ರಿಯಾಲೋಪ ಇದೆ. ಮಾನ್ಯ ಶ್ರೀ ದೇವೇಗೌಡರು ಯಾವ ಅಲಿಗೇಷನ್‌ಗಳನ್ನು ಎನ್‌ಕ್ವೈರಿ ಮಾಡಬೇಕೆಂದು ಹೇಳುತ್ತಾರೋ ನನಗೆ ಗೊತ್ತಿಲ್ಲ. ಮಾನ್ಯ ಮಂತ್ರಿಗಳು ಎಂದೋ ಆಗಿರುವ ವಿಚಾರವನ್ನು ಇಲ್ಲಿ ಈಗ ತಂದು ಹೇಳುವುದು ಸರಿಯಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಈಗ ಎನ್‌ಕ್ವೈರಿ ಎನ್ನುವ ಪದಕ್ಕೆ ಅರ್ಥವೇ ಇಲ್ಲದ ಹಾಗಾಗುತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ —ನಾನು ಎಂಟು ಚಾರ್ಜುಗಳನ್ನು ಕೊಟ್ಟು ಸೂಚನೆ ಕಳುಹಿಸಿದ್ದೇನೆ. ಮಂತ್ರಿ ನಿರ್ದಿಷ್ಟವಾದ ವಿಚಾರಗಳನ್ನೇ ಅಲ್ಲಿ ಹೇಳಿರುವುದು.

ಶ್ರೀ ಎಚ್. ಸಿದ್ದವೀರಪ್ಪ.—ಇದರಿಂದೇನಾಗುತ್ತದೆ ಎಂದರೆ ಚಾರ್ಜ್ ಕೌಂಟರ್ ಚಾರ್ಜುಗಳು ಆದಕ್ಕೆ ಕೌಂಟರ್ ಚಾರ್ಜುಗಳು ಈ ರೀತಿ ಹೋದರೆ ಇದರ ಜೆನಿಕ್ಸ್ ಹೋಗಿಬಿಡುತ್ತದೆ. ಇದರಿಂದ ದೇಶದ ಉನ್ನತಿಯಾಗುವುದಿಲ್ಲ. ದೇಶಕ್ಕೆ ಯಾವ ಪ್ರಯೋಜನವೂ ಆಗುವುದಿಲ್ಲ. ಇಂತಹ ಎನ್‌ಕ್ವೈರಿಗಳನ್ನು ಮಾಡಬೇಕಾದರೆ ಅದಕ್ಕೆಲ್ಲಾ ಒಂದು ರೀತಿಯಾದ ಪ್ರೊಸೀಜರು ಇದೆ, ಅದರಂತೆ ನಾವು ಮಾಡ ಬೇಕಾಗುತ್ತದೆ ಸುಮ್ಮನೆ ಇಲ್ಲಿ ಬಂದು ಮಾನ್ಯ ಅಜೀಜ್ ಸೇಟರವರು ಹತ್ತು ಸಾವಿರ ರೂಪಾಯಿ ತಿಂದರು ಇನ್ನೊಬ್ಬರು ಐದು ಸಾವಿರ ರೂಪಾಯಿ ತಿಂದರು ಎನ್ನುವುದಕ್ಕಿಂತ ಸರಿಯಾಗಿ ಯಾರ ಮೇಲೆ ಆರೋಪಣೆ ಇದೆ ಎನ್ನುವುದರ ಬಗ್ಗೆ ನಿರ್ದಿಷ್ಟವಾದ ಚಾರ್ಜುಗಳನ್ನು ಇಲ್ಲಿ ಫ್ರೇಂ ಮಾಡಿ ತರಬೇಕು.

ಇದನ್ನು ಮಾಡುವುದಕ್ಕೆ ನೀವು ತಯಾರಾಗಿಲ್ಲ. ನೀವು ಹೇಳುತ್ತಿರುವುದೆಲ್ಲಾ ಏನು ಎಂದರೆ ಇಲ್ಲಿ ಕೆರೆ ಕಟ್ಟಿಲ್ಲ, ಅಲ್ಲಿ ನಾಲಾ ಮಾಡಲಿಲ್ಲ ಇದನ್ನು ಮಾಡಿದ್ದರೆ ಆಹಾರದ ಅಭಾವ ಬರುತ್ತಿರಲಿಲ್ಲ ಎಂದು ಹೇಳುತ್ತೀರಿ. ಕೊನಗೆ ಏನಾಗುತ್ತದೆ ಎಂದರೆ ಇಲ್ಲಿ ನೀವೇ ಹೇಳುವಂತೆ ಘಟಪ್ರಭಾ, ಮಲಪ್ರಭಾ ಕೃಷ್ಣ ಯೋಜನೆಗಳಾಗಲಿಲ್ಲ ಎಂದು ಹೇಳುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ —ನಾವೇನೂ ಘಟಪ್ರಭಾ, ಮಲಪ್ರಭಾ ಪ್ರಾಜೆಕ್ಟ್‌ಗಳ ಬಗ್ಗೆ ಹೇಳುತ್ತಿಲ್ಲ. ಇದರ ಶಹಭಾಸ್‌ಗಿರಿಯನ್ನು ನೀವೇ ತೆಗೆದುಕೊಳ್ಳಿ. ಆದರೆ ಜನತೆಗೆ ಅನುಕೂಲವಾಗುವ ಎಲ್ಲ ಕೆಲಸಗಳನ್ನೂ ಮಾಡಿ, ಇದಕ್ಕೆ ನಾವು ಅಡ್ಡಿ ಮಾಡುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಹಿಂದೆ ನಿಮ್ಮವರೇ ಮುಖ್ಯ ಮಂತ್ರಿಗಳಾಗಿದ್ದವರು ಇಂತಹ ವಿಚಾರಣೆ ಏಕೆ ಮಾಡಲಿಲ್ಲ ಎಂದು ಹೀಗೆ ಏನೇನೋ ಹೇಳುವುದರಿಂದ ಯಾವ ಉಪಯೋಗವೂ ಆಗುವುದಿಲ್ಲ. ಯಾವುದೋ ಒಂದು ಕಾಲದಲ್ಲಿದ್ದಂತೆ ನೀವು ಹಿಂದೆ ಅಧಿಕಾರದಲ್ಲಿದ್ದಿರಿ. ಇಂದು ಜನ ಮೆಚ್ಚಿ ನಮ್ಮನ್ನು ಕಳುಹಿಸಿದ್ದಾರೆ. ಈಗ ನಾವು ಅಧಿಕಾರದಲ್ಲಿದ್ದೇವೆ. ಮುಂದೆ ನಾವು ಒಂದು ವೇಳೆ ಅಧಿಕಾರ ಕಳೆದು ಕೊಂಡರೂ ಯಾವ ಕಾಲಕ್ಕೂ ನಿಮ್ಮ ಪಾರ್ಟಿಯವರು ಅಧಿಕಾರಕ್ಕೆ ಎಂದೂ ಬರುವುದಿಲ್ಲ. ಹಾಗೆ ಸರಕಾರ ಬಂದರೆ ಶ್ರೀ ನಾಗರಾಜ್‌ರವರು ಸರಕಾರ ಬರಬಹುದು ಇಲ್ಲವೇ ಶ್ರೀ ಕಾಗೋಡು ತಿಮ್ಮಪ್ಪನವರ ಸರಕಾರ ಬರುಹುದು, ನೀವು ಎಂದೆಂದಿಗೂ ಬರುವುದಿಲ್ಲ. ನಿಮಗೆ ಜನರ ಶಾಪವಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಶ್ರೀ ಸಿದ್ದವೀರಪ್ಪನವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ ನಮಗಂತೂ ಇದರಲ್ಲಿ ಭಾಸವಾಗುತ್ತಿರುವುದು ನೀವು ಅಧಿಕಾರದಲ್ಲಿರುವುದಿಲ್ಲ ಎನ್ನುವ ಸ್ವಪ್ನ ಕಾಣುತ್ತಿದ್ದಾರೆ, ಇದಕ್ಕಾಗಿ ಎಲ್ಲೆಲ್ಲೋ ಹೋಗಿ ಹೇಳಿಕೆ ಕೊಡುತ್ತಿದ್ದಾರೆ.

11-00 A.M.

ನಮ್ಮ ಪಾರ್ಟಿ ಅಧಿಕಾರಕ್ಕೆ ಬರದಿದ್ದರೂ ಪರವಾಗಿಲ್ಲ, ನಿಮ್ಮ ಅಧಿಕಾರದ ಅವಧಿ ಮುಗಿಯುವ ಸನ್ನಿವೇಶಕ್ಕೆ ಬಂದಿರಬಹುದು. ಆ ಒಂದು ವಾಸನೆ ನಿಮ್ಮ ಕನಸಿನಲ್ಲಿ ಬಂದಿರಬಹುದು. ಅದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಅಧಿಕಾರ ಬಂದರೆ ಎಷ್ಟೋ ಬರದಿದ್ದರೂ ಅಷ್ಟೆ.

ಅಧ್ಯಕ್ಷರು.—ಈಗ ಮುಂದಿನ ವಿಷಯಕ್ಕೆ ಹೋಗೋಣ.

* * * * * *

ಶ್ರೀ ಎಚ್ ಡಿ. ದೇವೇಗೌಡ —ಸೋಮವಾರ ರಜಾ ಬೇಕೆಂದು ಕೆಲವು ಮಾನ್ಯ ಸದಸ್ಯರು ಅಭಿ ಅಭಿಪ್ರಾಯ ಪಡಂತ್ತಿದ್ದಾರೆ. ಆ ರೀತಿ ಕೊಡುವುದರಿಂದ ಕೆಲವರಿಗೆ ಅನುಕೂಲವಾಗಬಹುದು. If necessary we are prepared to sit one more day. If the Chief Minister were to agree to the proposal, we can meet at 1 P. M. on Tuesday.

SRI D. DEVARAJ URS.—In view of the desire expressed by the Opposition Leader, other members of the Opposition and also the members on this side, I have no objection if the Speaker is agreeable to it.

MADAM SPEAKER.—I agree.

MUNICIPAL TAXATION (MYSORE EXTENSION) BILL 1973

SRI B BASAVALINGAPPA (Minister for Municipal Administration).—Madam, I beg to move—

> "That the Municipal Taxation (Mysore Extension) Bill, 1973 be taken into consideration."

MADAM SPEAKER.—Motion moved—

> "That the Municipal Taxation (Mysore Extension) Bill, 1973 be taken into consideration."

† ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, The Municipal Taxation (Mysore Extension) Bill 1973. ಇನಿದೆ, ಇದು The Municipal Taxation Act 1881ರ ಸೆಂಟ್ರಲ್ ಆಕ್ಟ್ ಆಗಿದೆ. ಈ ಒಂದು ಆಕ್ಟ್ ನಮ್ಮ ಮೈಸೂರು ರಾಜ್ಯದ ಹಳೆಯ ಮೈಸೂರು ಭಾಗವನ್ನು ಬಿಟ್ಟರೆ ಉಳಿದ ಎಲ್ಲ ಭಾಗಗಳಲ್ಲಿಯೂ ಈಗ ಜಾರಿಯಲ್ಲಿದೆ. ಇದನ್ನು ಹಳೆಯ ಮೈಸೂರಿಗೂ ಸಹ ಅನ್ವಯ ಮಾಡಬೇಕೆಂಬ ದೃಷ್ಟಿಯಿಂದ ಈ ಬಿಲ್‌ನ್ನು ತರಲಾಗಿದೆ. ಮತ್ತು ಈ ಬಿಲ್‌ನ ಮತ್ತೊಂದು ಉದ್ದೇಶವೆಂದರೆ, ಎಲ್ಲೆಲ್ಲಿ ಮಿಲಿಟರಿ ಅಧಿಕಾರಿಗಳು ಇರುತ್ತಾರೆ, ಅವರಿಗೆ ಮುನಿಸಿಪಾಲಿಟಿಗಳ ತೆರಿಗೆಯಿಂದ ವಿನಾಯಿತಿ ಕೊಡುವುದು. ಈ ಒಂದು ಆಕ್ಟ್ ಈಗ ದೇಶದ ಎಲ್ಲ ಭಾಗಗಳಲ್ಲಿಯೂ ಜಾರಿಯಲ್ಲಿದೆ. ಆದರೆ ನಮ್ಮ ಹಳೆಯ ಮೈಸೂರು ಭಾಗದಲ್ಲಿ ಜಾರಿಯಲ್ಲಿ ಇರಲಿಲ್ಲವಾದ್ದರಿಂದ ಈ ಬಿಲ್‌ನ್ನು ಸಭೆಯ ಮುಂದೆ ತರಬೇಕಾಯಿತು. ಆದಕಾರಣ ಇದನ್ನು ಪಾಸ್ ಮಾಡಬೇಕೆಂದು ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

Matter expunged as ordered by the chair